# ಗೂಗಲ್ ಒನ್: ಬ್ಯಾಕ್‌ಅಪ್-ರೀಸ್ಟೋರ್

ಗೂಗಲ್ ಈಚೆಗೆ 'ಗೂಗಲ್ ಒನ್' ಕ್ಲೌಡ್ ಸ್ಟೋರೇಜ್ ಆ್ಯಪ್ ಪರಿಚಯಿಸಿ ಗೂಗಲ್ ಡ್ರೈವ್ ಅನ್ನು ಇದರೊಂದಿಗೆ ವಿಲೀನಗೊಳಿಸುವಂತೆ ಬಳಕೆದಾರರಿಗೆ ಮನವಿ ಮಾಡಿತ್ತು. ಇದು ಗೂಗಲ್‌ನ ಸೇವೆಗಳ ಬಳಕೆದಾರರ ಎಲ್ಲ ಮಾಹಿತಿ ಹಾಗೂ ದಾಖಲಾತಿಯ ಏಕೀಕೃತ ಕ್ಲೌಡ್ ಸ್ಟೋರೇಜ್ ಆ್ಯಪ್ ಆಗಿದೆ.

'ಗೂಗಲ್ ಡ್ರೈವ್' ಸಹ ಕ್ಲೌಡ್ ಸ್ಟೋರೇಜ್ ಆಗಿಯೇ ಕಾರ್ಯನಿರ್ವಹಿಸುತ್ತಿತ್ತು. ತನ್ನೆಲ್ಲ ಸೇವೆಗಳನ್ನು ಒಂದೇ ವೇದಿಕೆಯಡಿ ಸ್ಟೋರೇಜ್ ಮಾಡುವ ನಿಟ್ಟಿನಲ್ಲಿ ಕಂಪನಿಯು 'ಗೂಗಲ್ ಒನ್' ಹೊರತಂದಿದೆ.

ಇದು 'ಡ್ರೈವ್'ನಂತೆಯೇ 15 ಜಿಬಿ ವರೆಗಿನ ಸ್ಟೋರೇಜ್ ಅವಕಾಶವನ್ನು ಉಚಿತವಾಗಿ ಕಲ್ಪಿಸುತ್ತದೆ. ಇದು ಇತರೆ ಆನ್‌ಲೈನ್ ಕ್ಲೌಡ್ ಸ್ಟೋರೇಜ್ ಆ್ಯಪ್‌ಗಳಂತೆಯೇ ಎನ್ನಬಹುದು. 15 ಜಿಬಿಗಿಂತಲೂ ಅಧಿಕ ಸ್ಟೋರೇಜ್ ಬಳಸುವವರು ಮಾತ್ರ ಇದಕ್ಕೆ ಲಾಗಿನ್ ಆಗಲು ಸಾಧ್ಯ.

'ಗೂಗಲ್ ಒನ್'ನ ವಿಶೇಷವೆಂದರೆ ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳ ಮಲ್ಟಿಮೀಡಿಯಾ ಕಂಟೆಂಟ್, ಸಂಪರ್ಕ ಸಂಖ್ಯೆಗಳು, ಸಂದೇಶಗಳು ಸೇರಿದಂತೆ ಇತರ ಮಾಹಿತಿಗಳನ್ನು ಬ್ಯಾಕ್‌ಅಪ್ ಮಾಡಿ ಮತ್ತೆ ಅದನ್ನು ರೀಸ್ಟೋರ್ ಮಾಡಬಹುದಾಗಿದೆ. ಅದಕ್ಕಾಗಿ ಮೊಬೈಲ್‌ನಲ್ಲಿ ಈ ಆ್ಯಪ್ ಇನ್‌ಸ್ಟಾಲ್ ಮಾಡಿರಬೇಕು. ಜೊತೆಗೆ ಇಂಟರ್‌ನೆಟ್ ಸಂಪರ್ಕ ಇರುವಂತೆ ನೋಡಿಕೊಳ್ಳಬೇಕು. ಸ್ಟೋರೇಜ್ ಪ್ಲಾನ್ ಅನ್ನು ಆಕ್ಟೀವ್ ಮಾಡಿರಬೇಕು.

### ಬ್ಯಾಕ್‌ಅಪ್ ಮಾಡುವ ವಿಧಾನ

ಗೂಗಲ್ ಒನ್ ತೆರೆದು ನಿಮ್ಮ ಜಿ–ಮೇಲ್ ಐಡಿಯಿಂದ ಲಾಗಿನ್ ಆಗಬೇಕು. ಪರದೆ ಮೇಲೆ ಕಾಣುವ ಸ್ಟೋರೇಜ್ ಪ್ಲಾನ್‌ನಲ್ಲಿ ನಿಮಗಿಷ್ಟವಾದದ್ದು ಹಾಗೂ ಅಗತ್ಯವಾದುದ್ದನ್ನು ಆಯ್ಕೆ ಮಾಡಿಕೊಳ್ಳಬೇಕು.

ಬಳಿಕ ಆ್ಯಪ್‌ನ 'ಹೋಮ್' ವಿಭಾಗದಲ್ಲಿ ಕಾಣುವ 'ಬ್ಯಾಕ್‌ಅಪ್ ನೌ' ಎಂಬ ಆಯ್ಕೆಯನ್ನು ಒತ್ತಬೇಕು. ಬಳಿಕ ನೀವು ಯಾವೆಲ್ಲ ಕಂಟೆಂಟ್ ಅನ್ನು ಅಥವಾ ಮಾಹಿತಿಯನ್ನು ಬ್ಯಾಕ್ ಅಪ್ ಮಾಡಲು ಇಚ್ಛಿಸುತ್ತೀರಿ ಎಂದು ಟಿಕ್ ಮಾಡಿ ನೆಕ್ಸ್ಟ್ ಆಯ್ಕೆ ಕ್ಲಿಕ್ಕಿಸಿದ ಮೇಲೆ ಕಾಣುವ 'ಬ್ಯಾಕ್ ಅಪ್ ನೌ' ಎಂಬ ಆಪ್ಷನ್ ಅನ್ನು ಒತ್ತಬೇಕು. ಅದರ ಪ್ರಕ್ರಿಯೆ ಪೂರ್ಣವಾಗುವವರೆಗೆ ಕಾದರೆ ಬ್ಯಾಕ್‌ಅಪ್ ಕಾರ್ಯ ಪೂರ್ಣಗೊಂಡಂತೆ.

### ರೀಸ್ಟೋರ್ ವಿಧಾನ

ಆ್ಯಪ್‌ನ 'ಹೋಮ್' ವಿಭಾಗದಲ್ಲಿ ಕಾಣುವ ರೀಸ್ಟೋರ್ ಆಯ್ಕೆಯನ್ನು ಮೊದಲು ಕ್ಲಿಕ್ಕಿಸಬೇಕು. ಕ್ರಮೇಣ ಯಾವ ಮಾಹಿತಿ ಅಥವಾ ಕಂಟೆಂಟ್ ರೀಸ್ಟೋರ್‌ಗೆ ಲಭ್ಯವಿದೆ ಎಂಬುದು ಕಾಣುತ್ತದೆ. ಆದನ್ನು ಆಯ್ಕೆ ಮಾಡಿಕೊಂಡು ರೀಸ್ಟೋರ್ ಆಯ್ಕೆ ಒತ್ತಿದರೆ ನಿಮ್ಮ ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್‌ನಲ್ಲಿ ಮಾಹಿತಿಯು ರೀಸ್ಟೋರ್ ಆಗಿರುತ್ತದೆ. ■

# ಇನ್‌ಸ್ಟಾಗ್ರಾಂ ಸ್ಪ್ಯಾಮ್ ಇ-ಮೇಲ್ ಪತ್ತೆ ಹೇಗೆ?

ಫೇಸ್‌ಬುಕ್ ಒಡೆತನದ ಇನ್‌ಸ್ಟಾಗ್ರಾಂ ಸಂಬಂಧ ಕೆಲವೊಂದು ಇ–ಮೇಲ್‌ಗಳು ಇನ್‌ಬಾಕ್ಸ್ ಸೇರುತ್ತಿವೆ. ಆ ಇ–ಮೇಲ್‌ಗಳನ್ನು ತೆರೆದರೆ ಬಳಕೆದಾರರ ವೈಯಕ್ತಿಕ ಮಾಹಿತಿ ಸೇರಿದಂತೆ ಇನ್ನಿತರ ಮಾಹಿತಿ ನಮೂದಿಸಬೇಕಾಗುತ್ತದೆ. ಇನ್‌ಸ್ಟಾಗ್ರಾಂ ಖಾತೆ ಬಳಕೆದಾರರು, 'ನಮ್ಮ ಅಕೌಂಟ್ ಸಂಬಂಧವಾಗಿ ತಾನೇ' ಎಂದು ಹಿಂದು ಮುಂದು ನೋಡದೇ ಆ ಎಲ್ಲ ಮಾಹಿತಿಯನ್ನು ನಮೂದಿಸುತ್ತಾರೆ. ವಾಸ್ತವವಾಗಿ ಅವುಗಳು ಸ್ಪ್ಯಾಮ್ ಇ–ಮೇಲ್‌ಗಳಾಗಿರುತ್ತವೆ.

ಹ್ಯಾಕರ್ಸ್ ಮಾಹಿತಿ ಕದಿಯುವ ಸಲುವಾಗಿಯೇ ಇಂತಹ ಸ್ಪ್ಯಾಮ್ ಇ–ಮೇಲ್‌ಗಳನ್ನು ಇನ್‌ಸ್ಟಾಗ್ರಾಂ ಬಳಕೆದಾರರಿಗೆ ಕಳುಹಿಸುತ್ತಿದ್ದಾರೆ. ಅವರ ಇ–ಮೇಲ್‌ಗೆ ಭೇಟಿ ಕೊಟ್ಟರೆ ಮಾಹಿತಿ ಸೋರಿಕೆಯಾಗುವ ಜೊತೆಗೆ ಅಂತಹ ಇನ್‌ಸ್ಟಾಗ್ರಾಂ ಬಳಕೆದಾರರ ಖಾತೆಗಳೂ ಮುಂದಿನ 48 ಗಂಟೆಗಳ ಒಳಗೆ ಡೀ–ಆಕ್ಟಿವೇಟ್ ಆಗುತ್ತವೆ. ಈ ಬಗ್ಗೆ ಎಚ್ಚೆತ್ತುಕೊಂಡಿರುವ ಇನ್‌ಸ್ಟಾಗ್ರಾಂ, ತನ್ನ ಹೆಸರಿನಲ್ಲಿ ಬರುವ ಇ–ಮೇಲ್‌ಗಳ ಅಸಲಿತನದ ಬಗ್ಗೆ ತಿಳಿದುಕೊಳ್ಳುವ ಹೊಸ ಫೀಚರ್ ಒಂದನ್ನು ತನ್ನ ಆ್ಯಪ್‌ನಲ್ಲಿ ಅಳವಡಿಸಿದೆ. ಅದುವೇ 'ಇ–ಮೇಲ್ಸ್ ಫ್ರಮ್ ಇನ್‌ಸ್ಟಾಗ್ರಾಂ' ಫೀಚರ್.

ಸ್ಪ್ಯಾಮ್ ಇ–ಮೇಲ್‌ಗಳಿಂದ ಬಳಕೆದಾರರಿಗೆ ರಕ್ಷಣೆ ಒದಗಿಸುವ ಸಲುವಾಗಿಯೇ ಸಾಮಾಜಿಕ ಜಾಲತಾಣಗಳು ಸಾಕಷ್ಟು ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಂಡಿವೆ. ಅವುಗಳ ಸಾಲಿಗೆ 'ಇ–ಮೇಲ್ಸ್ ಫ್ರಮ್ ಇನ್‌ಸ್ಟಾಗ್ರಾಂ' ಸಹ ಈಗ ಸೇರಿದೆ. ಇನ್‌ಸ್ಟಾಗ್ರಾಂ ಹೆಸರಿನಲ್ಲಿ ಬಂದ ಇ–ಮೇಲ್ ಅಸಲಿಯದ್ದೋ ಅಥವಾ ಹ್ಯಾಕರ್ಸ್ ಕಳುಹಿಸಿದ್ದೋ ಎಂಬುದನ್ನು ತಿಳಿಯಲು ಈ ಫೀಚರ್ ನೆರವಿಗೆ ಬರುತ್ತದೆ. ಅದಕ್ಕಾಗಿ ಬಳಕೆದಾರರು ಮಾಡಬೇಕಿರುವುದು ಇಷ್ಟೇ.

### ತಿಳಿಯುವುದು ಹೇಗೆ?

ಮೊದಲು ಇನ್‌ಸ್ಟಾಗ್ರಾಂನ ಪ್ರೊಫೈಲ್ ಐಕಾನ್ ಮೇಲೆ ಕ್ಲಿಕ್ಕಿಸಬೇಕು. ಬಳಿಕ ಕಾಣುವ ಆ್ಯಪ್‌ನ ಬಲಭಾಗದಲ್ಲಿ ಕಾಣುವ ಮೂರು ಅಡ್ಡಗೆರೆಗಳುಳ್ಳ ಆಯ್ಕೆಯನ್ನು ಒತ್ತಬೇಕು. ಅದಾದ ಮೇಲೆ ಕಾಣುವ ಸೆಟ್ಟಿಂಗ್ಸ್ ಅನ್ನು ಕ್ಲಿಕ್ಕಿಸಿದರೆ ಸೆಕ್ಯುರಿಟಿ ಎಂಬ ಆಯ್ಕೆ ಕಾಣುತ್ತದೆ. ಅದರ ಕೆಳಗೆ ಪಾಸ್‌ವರ್ಡ್, ಟು–ಫ್ಯಾಕ್ಟರ್ ಅಥೆಂಟಿಕೇಷನ್ ಮತ್ತು ಇ–ಮೇಲ್ಸ್ ಫ್ರಮ್ ಇನ್‌ಸ್ಟಾಗ್ರಾಂ ಎಂಬ ಮೂರು ಆಯ್ಕೆಗಳು ಕಾಣುತ್ತವೆ. ಆ ಪೈಕಿ ಮೂರನೆಯದನ್ನು ಕ್ಲಿಕ್ಕಿಸಿದರೆ ಕಳೆದ 14 ದಿನಗಳ ಇನ್‌ಸ್ಟಾಗ್ರಾಂನಿಂದ ನಿಮ್ಮ ಇ–ಮೇಲ್‌ಗೆ ರವಾನೆಯಾದ ಮೇಲ್‌ಗಳಿರುತ್ತವೆ. ಒಂದು ವೇಳೆ ಯಾವುದೇ ಇ–ಮೇಲ್ ಇಲ್ಲವಾದರೆ ನಿಮಗೆ ಬಂದಿರುವುದು ಸ್ಪ್ಯಾಮ್ ಇ–ಮೇಲ್ ಎಂಬುದು ಖಾತರಿ.

■ ಸಿರಿ